**I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

OS.No. 1662/11
PW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 31-01-2020.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರು ಶ್ರೀ . ABK ರವರಿಂದ.**

1. ಸರ್ವೆ ನಂ 95/3 ರಲ್ಲಿ ಮನೋಹರ ನಂದಿಹಳ್ಳಿ ಎಂಬುವರು 6 ಪ್ಲಾಟಗಳನ್ನು ಮಾಡಿದ್ದರು ಮತ್ತು ಅದರ ಪೈಕಿ ಒಂದು ಪ್ಲಾಟನ್ನು ದಶರತ ಜಿನ್ನಪ್ಪ ರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಗ್ರಾಮ ಪಂಚಾಯತಿ ಪೀರಣವಾಡಿಗೆ ಸದರಿ ದಶರತ ರವರು ಅರ್ಜಿಯನ್ನು ನೀಡಿ ಸದರಿ ಪ್ಲಾಟಿಗೆ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ .
2. ಸದರಿಯವರು 3 ನೇ ಹೆಚ್ಚುವರಿ ಸಿವಿಲ ನ್ಯಾಯಾಲಯದಲ್ಲಿ ಸದರಿ ಪ್ಲಾಟಗೆ ಸಂಬಂಧಿಸಿದ ಒ ಎಸ್ ನಂ 66/2003 ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ದಾವೆಯು ಡಿಕ್ರಿಯಾಗಿ ಅದರಂತೆ ದಶರತವರು ಅದರ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ .
3. ದಿ 02-09-2009 ರಂದು ಸದರಿ ದಶರತ ರವರು 2 ನೇ ಪ್ರತಿವಾದಿಗೆ Irrevocable General Power of Attorney ಯನ್ನು ಬರೆದು ಕೊಟ್ಟಿದ್ದು ಅದರ ಅನುಸಾರ 2 ನೇ ಪ್ರತಿವಾದಿ ಸದರಿ ಆಸ್ತಿಯ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ .
4. 2 ನೇ ಪ್ರತಿವಾದಿ ವೃತ್ತಿಯಲ್ಲಿ ಇಂಜಿನಿಯರ ಎಂದರೆ ನನಗೆ ಗೊತ್ತಿಲ್ಲ . ದಾವಾ

ಆಸ್ತಿಯಲ್ಲಿ 2009 ರಿಂದ ಸದರಿಯವರೆ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

5. ಈಗ ಸಾಕ್ಷಿಗೆ ನಿಪಿ4 ದಾಖಲೆಯನ್ನು ತೊರೀಸಿ ಸದರಿ ದಾಖಲೆಯಲ್ಲಿ ಹಳೆಯ ಮತ್ತು ಹೊಸ ಕಂಬಗಳು ಕಾಣ ಸಿಗುತ್ತವೆ ಎಂದರೆ ಸರಿ . ಈ ದಾವೆಯನ್ನು ಹಾಕುವ ಪೂರ್ವದಲ್ಲಿ ದಾವಾ ಆಸ್ತಿಯ ಕಬ್ಜೆಯು ನಮ್ಮ ಬಳಿಯೇ ಇದೆ ಎಂದು ತೊರಿಸಲು 2 ನೇ ಪ್ರತಿವಾದಿ ಹಾಕಿದ ಕಂಬಗಳನ್ನು ಕಿತ್ತು ಹಾಕಿ ನಾವು ಹೊಸ ಕಂಬಗಳನ್ನು ಹಾಕಿದ್ದೆವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಳೆ ಕಂಬಗಳನ್ನು ನಾವೇ ಹಾಕಿದ್ದೆವು ಅವುಗಳನ್ನು ಯಾರೊ ಕಿತ್ತು ಹಾಕಿದ್ದರು ಈಗ ಮತ್ತೆ ನಾವು ಹೊಸ ಕಂಬಗಳನ್ನು ಹಾಕಿದ್ದೆವೆ ಎಂದು ನುಡಿಯುತ್ತಾರೆ .

6. ನಿಪಿ 3 ಮತ್ತು 4 ಪೊಟೊಗಳಲ್ಲಿರುವ ಜಾಗವನ್ನು 2 ನೇ ಪ್ರತಿವಾದಿಗಳು ಸ್ವಚ್ಚಗೊಳಿಸಿ ತಾವೆ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

7. ಈ ದಾವೆಯನ್ನು ಹಾಕುವ ಪೂರ್ವದಲ್ಲಿ ನಮ್ಮ ಕಬ್ಜಗೆ ತೊಂದರೆ ಮಾಡುತ್ತಿದ್ದಾರೆಂದು 2 ನೇ ಪ್ರತಿವಾದಿಯರು ಪೋಲಿಸ ಠಾಣೆಗೆ ಹೊಗಿದ್ದರು ಆಗ ಪೊಲಿಸರು ನಮ್ಮನು ಕರೆಸಿ ಬುದ್ದಿ ಹೇಳಿದ್ದರು ಎಂದರೆ ಸರಿಯಲ್ಲ .

8. ದಾವಾ ಆಸ್ತಿಯು ಯಾವಾಗ ಎನ ಎ ಆಗಿ ಮಾರ್ಪಾಟಾಯಿತು ಎಂದು ಅದರ ನಂಬರ ಹೇಳಲು ನನಗೆ ಬರುವುದಿಲ್ಲ . ಸರ್ವೆ ನಂ 95/3 ಆಸ್ತಿಯ ಕೃಷಿ ಭೂಮಿಯಾಗಿದ್ದು ಅದು ಕೃಷಿಯೇತರ ಭೂಮಿಯಾಗಿಲ್ಲ ಎಂದರೆ ಸಾಕ್ಷಿಯು ಅದನ್ನು ಮಾರಾಟ ಮಾಡುವ ಮಾಲಿಕರು ನಮಗೆ ಎನ ಎ ಆಗಿದೆ ಎಂದು ತಿಳಿಸಿರುತ್ತಾರೆ.

9. ಸುಭಾಶ ಒಮನ್ನಾ ಪಾಟೀಲರವರೊಂದಿಗೆ ಸೇರಿ ನಾವು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸುಳ್ಳು ಖರೀದಿ ಪತ್ರವನ್ನು ಮಾಡಿಕೊಂಡಿದ್ದೆವೆ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿಯರ ಕಬ್ಜೆಯಲ್ಲಿರುವ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾ . ಹಾಗೂ
ಜೆ ಎಮ್ ಎಫ್ ಸಿ, ಬೆಳಗಾವಿ